ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನನ್ನ ಗಂಡ ಬಿ ರಮೇಶ್ ರವರು ಎಳನೀರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಎಳನೀರು ವ್ಯಾಪಾರ ಮಾಡಲು ಟೆಂಪೋ ಇಟ್ಟುಕೊಂಡಿದ್ದರು ಎಂದರೆ ಸರಿ. ಲಗೇಜ್ ಟಂಟೋವನ್ನು ನನ್ನ ಗಂಡ ಬ್ಯಾಂಕಿನಿಂದ ಸಾಲ ಪಡೆದು ಖರಿದಿಸಿದ್ದರು ಎಂದರೆ ಸರಿ. ನನ್ನ ಗಂಡ ಎಳನೀರು ವ್ಯಾಪಾರ ಮಾಡಲು ಬಹಳಷ್ಟು ಜನರಲ್ಲಿ ಸಾಲ ಮಾಡಿದ್ದರು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಸಾಲವನ್ನು ತೀರಿಸಲು ದಿನಾಂಕ 07.06.2011ರಂದು ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 07.06.2011ರ ಕ್ರಯದ ಕರಾರು ಪತ್ರದ ಪ್ರಕಾರ 10 ಲಕ್ಷ ರೂಪಾಯಿ ಕ್ರಯ ಮಾಡಲು ನಿಗಧಿಯಾಗಿತ್ತು ಎಂದರೆ ಸರಿ. ಸದರಿ ಕರಾರು ಪತ್ರದ ಪ್ರಕಾರ ನಾನು ಮತ್ತು ನನ್ನ ಗಂಡ 5 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದ ಹಣವನ್ನು ಉಳಿದ ದಾಖಲೆಗಳನ್ನು ರೆಡಿಮಾಡಿ ಕ್ರಯ ಪತ್ರವನ್ನು ಬರೆದುಕೊಡುವುದಾಗಿ ಒಪ್ಪಿ ಕೊಂಡಿದ್ದೆವು ಎಂದರೆ ಸರಿಯಲ್ಲ. ದಿನಾಂಕ 07.06.2011ರ ಕ್ರಯದ ಕರಾರು ಪತ್ರದಲ್ಲಿ ಇರುವ ಎಲ್ಲಾ ಒಕ್ಕಣೆಗಳು ಸರಿ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 07.06.2011ರ ಕ್ರಯದ ಕರಾರು ಪತ್ರದಲ್ಲಿ ಇರುವ ನನ್ನ ಮತ್ತು ಗಂಡನ ಸಹಿಗಳಾಗಿರುತ್ತವೆ ಎಂದರೆ ಸಾಕ್ಷಿ ಅವುಗಳು ನನ್ನ ಮತ್ತು ಗಂಡನ ಸಹಿಗಳು ಅಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಗಂಡ ದಿನಾಂಕ 07.06.2011ರಂದು ನೋಂದಣಿ ಕಛೇರಿಗೆ ಹೋಗಿದ್ದೆವು ಎಂದರೆ ಸರಿ. ಕರಾರಿನ ಒಕ್ಕಣೆಯನ್ನು ನೋಂದಣಾಧಿಕಾರಿಗಳ ಕಛೇರಿಯಲ್ಲಿ ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

ನೋಂದಣಿಯಾಗುವ ಸಮಯದಲ್ಲಿ ಹೆಬ್ಬೆಟ್ಟು ಗುರುತು ಮತ್ತು ಸಹಿ ಫೋಟೋ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು, ಫೋಟೋ ನನ್ನ ಗಂಡನದ್ದು, ಆದರೆ ಹೆಬ್ಬೆಟ್ಟು ಗುರುತು ನನ್ನ ಗಂಡನದಲ್ಲ ಎಂದು ನುಡಿಯುತ್ತಾರೆ.

ದಿನಾಂಕ 07.06.2011ರ ಕ್ರಯದ ಕರಾರು ಪತ್ರದಲ್ಲಿ ಗೃಹಕೃತ್ಯದ ಖರ್ಚುಗಾಗಿ, ಕೈ ಸಾಲ ತೀರಿಸುವ ಸಲುವಾಗಿ ಮಾರಾಟ ಮಾಡುತ್ತಿದ್ದೇವೆ ಎಂದು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರ ತಯಾರಾಗುವ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ವಾದಿ ಎಲ್ಲರೂ ಇದ್ದೆವು ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವಾದ 11 ತಿಂಗಳ ನಂತರ ವಾದಿರವರು ಉಳಿಕೆ 5 ಲಕ್ಷ ಹಣ ತೆಗೆದುಕೊಂಡು ಬಂದು ಕ್ರಯ ಪತ್ರ ಬರೆದುಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನಾನು ವಾದಿಗೆ ಕ್ರಯ ಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳಲು ಒಂದಾಲ್ಲಾ ಒಂದು ಕಾರಣ ಕೊಟ್ಟು ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ವಾದಿರವರು ನಿಪಿ-6ರಂತೆ ಕ್ರಯ ಪತ್ರ ಬರೆದುಕೊಡುವಂತೆ ವಾದಿ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-6ರಂತೆ ನೋಟಿಸು ಕೊಟ್ಟ 20 ದಿನಗಳ ನಂತರ ನನ್ನ ಗಂಡ ತೀರಿಕೊಂಡ ನಂತರ ನಿಡಿ-9ರಂತೆ ನನಗೂ ಸಹ ನೋಟಿಸು ನೀಡಿರುತ್ತಾರೆ ಎಂದರೆ ಸರಿಯಲ್ಲ, ನಿಡಿ-9ರಂತೆ ನೋಟಿಸು ನೀಡಿದ ನಂತರ ನಾನು ದಿನಾಂಕ 07.01.2014ರಂದು ಪ್ರತ್ಯೂತ್ತರ ನೀಡಿರುತ್ತೇನೆ ಎಂದರೆ ಸರಿ. ನನ್ನ ಪ್ರತ್ಯೂತ್ತರ ನೋಟಿಸ್ ನಲ್ಲಿ ನನ್ನ ಗಂಡನಿಗೆ ಕುಡಿತ ಚಟ ಮತ್ತು ದುಷ್ಚಟಗಳು ಇದ್ದ ಬಗ್ಗೆ ಅವರ ತಂದೆತಾಯಿಯ ಮುಂದೆ ಪಂಚಾಯಿತಿ ನಡೆಸಿರುತ್ತೇನೆ. ಕರಾರು ಪತ್ರಕ್ಕೆ ನನ್ನ ಸಹಿ ಪಡೆದುಕೊಳ್ಳುತ್ತಿದ್ದಾರೆ ಎಂದು ನನ್ನ ಗಂಡನ ತಂದೆ ತಾಯಿಗೆ ಹೇಳಿರುವುದಿಲ್ಲ. ಮೋಸದಿಂದ ಕರಾರು ಪತ್ರದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನಾನು ದೂರು ನೀಡಿಲ್ಲ ಎಂದರೆ ಸರಿ ಆದರೆ

ನನ್ನ ಗಂಡ ಕಣೆಯಾಗಿದ್ದಾರೆ ಎಂದು ದೂರು ನೀಡಿರುತ್ತೇನೆ.

ಆನುಮಾನಹಳ್ಳಿ ಗ್ರಾಮದ ಸರ್ವೇ ನಂಬರ್ 31/ಸಿ 1 ಎಕರೆ 16 ಗುಂಟೆ ಸ್ವತ್ತನ್ನು 96 ಲಕ್ಷಕ್ಕೆ ಮಾರಾಟ ಮಾರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 33/ಎರ ಸ್ವತ್ತು ನನಗೆ ಸೇರಿರುತ್ತದೆ ಎಂದರೆ ಸರಿ. ದಿನಾಂಕ 25.09.2009ರಂದು ಆದ ದಾನ ಪತ್ರದ ಪ್ರಕಾರ ನನ್ನ ಗಂಡನಿಗೆ ಅವರ ತಾಯಿಯಿಂದ ಬಂದಿರುತ್ತವೆ ಎಂದರೆ ಸರಿ. ನಿಡಿ-8ರಂತೆ ದೂರನ್ನು ನಾನು ನನ್ನ ಗಂಡ ಕಾಣೆಯಾಗಿರುವ ಬಗ್ಗೆ ಮಾತ್ರ ನೀಡಿರುತ್ತೇನೆ ಎಂದರೆ ಸರಿ. 3ನೇ ಪ್ರತಿವಾದಿರವರಿಗೆ ನನ್ನ ಗಂಡನ ತಾಯಿಯಾದ ಶಾಂತಮ್ಮನವರು ದಿನಾಂಕ 06.02.2003ರಂದು ಒಂದು ವ್ಯವಸ್ಥಾ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. 3ನೇ ಪ್ರತಿವಾದಿ ನನ್ನ ಗಂಡನ ಮೊದಲನೇ ಹೆಂಡತಿ ಮಗ ಎಂದರೆ ಸರಿ. ದಾವಾ ಆಸ್ತಿ ನನ್ನ ಗಂಡನ ಸ್ವಯಾರ್ಜಿತ ಸ್ವತ್ತಾಗಿರುವ ಕಾರಣ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ. ದಿನಾಂಕ 07.06.2011ರ ಕ್ರಯ ದ ಕರಾರು ಪತ್ರದ ಪ್ರಕಾರ ನಾನು ನಡೆದುಕೊಳ್ಳಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನಾನು ಕ್ರಯ ಪತ್ರ ಬರೆದುಕೊಡುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರ ಬರೆದುಕೊಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 07.06.2011ರ ಕ್ರಯದ ಕರಾರು ಪತ್ರವನ್ನು ನಾನು ಮತ್ತು ನನ್ನ ಗಂಡ ಬರೆದುಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಕ್ರಯ ಪತ್ರವನ್ನು ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 07.06.2011ರ ಕ್ರಯದ ಕರಾರು ಪತ್ರದಂತೆ ವಾದಿಗೆ ಬರೆದುಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಕುಡಿಯುತ್ತಿದ್ದರಿಂದ ಅವರಿಗೆ ಹೆದರಿಸಿ ಬೆದರಿಸಿ ನನ್ನ ಮತ್ತು ನನ್ನ ಗಂಡನ ಕೈಯಿಂದ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದಾರೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆ ಮುಂದೆ ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆ ಮುಂದೆ ಗಲಾಟೆ ಮಾಡಿದ ಬಗ್ಗೆ ದೂರು ನೀಡಿರುತ್ತೇನೆ ಮತ್ತು ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಗಂಡ ಬದುಕಿದ್ದಾಗ ಹಲವಾರು ಜನ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ನಾನು ಪೊಲೀಸರ ಮುಂದೆ ದೂರು ನೀಡಿರುತ್ತೇನೆ. ಆ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಕಾಣೆಯಾಗಿದ್ದಾನೆ ಎಂದು ಮಾತ್ರ ದೂರು ನೀಡಿರುತ್ತೇನೆ ಎಂದರೆ ಸಾಕ್ಷಿ ಅವರನ್ನು ಹುಡುಕಿಕೊಡಿ ಎಂದು ನೀಡಿರುತ್ತೇನೆ ಎಂದು ನುಡಿಯುತ್ತಾರೆ, ನನ್ನಗಂಡ ಮೊದಲನೆ ಮದುವೆಯಾಗಿರುವುದನ್ನು ಮರೆಮಾಚಿ ನನ್ನನ್ನು ಮದುವೆಯಾಗಿದ್ದಾರೆ ಮತ್ತು ನನ್ನ ಗಂಡನಿಗೆ ದುಷ್ಚಟಗಳ ಇವೆ ಎಂದು ತೋರೀಸಲು ನಾನು ದಾಖಲೆ ಹಾಜರುಪಡಿಸಿರುತ್ತೇನೆ.

ನನ್ನ ಗಂಡ ತನ್ನ ಹೆಸರಿನಲ್ಲಿಇರುವ ಜಮೀನನ್ನು ನನ್ನ ಹೆಸರಿಗೆ ಮಾಡಿಸುತ್ತೇನೆ ಎಂದು ನನ್ನ ಕೈಯಿಂದ ಕ್ರಯದ ಕರರು ಪತ್ರಕ್ಕೆ ಸಹಿ ಮಾಡಿಸಿಕೊಂಡಿರುತ್ತೇನೆ ಆದರೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ಗಂಡ ಎಲ್ಲಿಗಾದರೂ ಕರೆದುಕೊಂಡು ಹೋಗಿ ಸಹಿ ಮಾಡು ಎಂದರೆ ಮಾಡುತ್ತಿದ್ದೀರಾ ಎಂದರೆ ಹೌದು ಅವರು ನನಗೆ ಒಡೆದು ಬಡಿದು ಮಾಡುತ್ತಿದ್ದರು ಹಾಗಾಗಿ ಸಹಿ ಮಾಡುತ್ತಿದ್ದೆ ಎಂದು ನು ಡಿಯುತ್ತಾರೆ. ನನ್ನ ಅತ್ತೆ ಶಾಂತಮ್ಮನವರೇ ಮನೆಯ ಎಲ್ಲಾ ಖರ್ಚು ನೋಡಿಕೊಳ್ಳುತಿದ್ದರು ಎಂದು ತೋರಿಸಲು ನಾನು ದಾಖಲೆ

ಹಾಜರುಪಡಿಸಿರುತ್ತೇನೆ.

ನಾನು ದಾವಾ ಆಸ್ತಿಯನ್ನು ಶೇಖರ್ ರವರಿಗೆ ಭೋಗ್ಯಕ್ಕೆ ಬರೆದುಕೊಟ್ಟಿರುವರ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ಒಂದು ಕೋಟಿ ಬೆಲೆ ಬಾಳುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ವಕೀಲರಿಗ ಭೋಗ್ಯ ಹಾಕಿರುವ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಗೆ ಕ್ರಯ ಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಬೆಳ್ತಂಗಡಿಯಲ್ಲಿಂತೀರಿಕೊಂಡ 4 ದಿನಗಳ ನಂತರ ನನಗೆ ಶವ ಹಸ್ತಾತಂರಿಸಿರುತ್ತಾರೆ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.